# News Paper Clipping



DECCAN HERALD

ON THE MOVE

METRO LIFE 3

# Cutting edge in assistive tech

**The rehabilitation centre uses assistive technology to help people with disabilities. December 3 is World Disability Day**

ANILA KURIAN

The equipment can be altered to make it comfortable for the wearer.

Children are given a colourful version.

**The history**

**Achievements over the years**

**IS THE CITY ACCESSIBLE FOR THE DISABLED?**

"There are places that are accessible to people with disabilities but only very few. Even though our building is accessible to everyone, the road and the footpaths to reach till here is hard. Even the pillars that are placed between the footpath that is meant to stop two wheelers is a hindrance for people on a wheelchair. There's still a long way to go for the city to be friendly for those with a disability," shares Albina, director of Mobility India.

"THIS TRAINING GAVE THEM WORK OPPORTUNITIES AND ENSURED THAT CHILDREN WITH DISABILITIES COULD GO TO SCHOOL." ALBINA SHANKAR, DIRECTOR, MI

**Future opportunities**

The calipers are designed to the persons' needs and requirements.

Mobility India building is easily accessible for those with disabilities.



ಚಾಮರಾಜನಗರದ ಮೊಬಿಲಿಟಿ ಇಂಡಿಯಾ ಕಚೇರಿಯಲ್ಲಿ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ದೃಷ್ಟಿ ಹಾಗೂ ವಾಕ್ ಮತ್ತು ಶ್ರವಣದೋಷದ ವಿವರಣೆ ಮತ್ತು ಸಹಾಯಕ ಸಾಧನಾ ಸಲಕರಣೆಗಳ ಅರಿವು ಹಾಗೂ ವಿಕಲಚೇತನ ಮಕ್ಕಳ ದೈನಂದಿನ ಚಟುವಟಿಕೆಗಳ ನಿರ್ವಹಣೆ ಕುರಿತು ಅರಿವು ಕಾರ್ಯಾಗಾರ ನಡೆಯಿತು.

ಪ್ರಜಾವಾಣಿ

ಅಂಗವಿಕಲ ಹಾಗೂ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸಾಧನ ಸಿದ್ಧತೆ ಕಾರ್ಯ

# ಸಲಕರಣೆ ಸಿದ್ಧಪಡಿಸಲು ವಿಶಿಷ್ಟ ಶಿಬಿರ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಅಂಗವಿಕಲ ಹಾಗೂ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಅಗತ್ಯವಾದ ಸಾಧನಗಳನ್ನು (ಅರ್ಥೋಸಿಸ್) ಪೂರೈಸುವುದಕ್ಕೂ ಪೂರ್ವಭಾವಿಯಾಗಿ ಅವುಗಳ ಅಳತೆಯ ಮಾಹಿತಿ ಸಂಗ್ರಹಿಸಲು ನಗರದ ಮಾರ್ಗದರ್ಶಿ ಸ್ವಯಂ ಸೇವಾ ಸಂಸ್ಥೆಯಲ್ಲಿ ವಿಶೇಷ ಶಿಬಿರ ನಡೆಯುತ್ತಿದೆ.

ಅಂಗವಿಕಲ ಮಕ್ಕಳ ಕ್ಷೇಯೋಭಿವೃದ್ಧಿಗಾಗಿ ಕೆಲಸ ಮಾಡುತ್ತಿರುವ ಮಾರ್ಗದರ್ಶಿ ಸಂಸ್ಥೆಯು ಈ ವರ್ಷ ನಾರ್ದರ್ನ್ ಆಪರೇಟಿಂಗ್ ಸರ್ವಿಸಸ್ ಪ್ರೈ ಲಿ. ಕಂಪೆನಿಯ ನೆರವಿನಿಂದ ಜಿಲ್ಲೆಯ 40 ಅಂಗವಿಕಲ ಮಕ್ಕಳಿಗೆ ವಿವಿಧ ಸಲಕರಣೆಗಳನ್ನು ಪೂರೈಸಲಿದೆ. ಮೊಬಿಲಿಟಿ ಇಂಡಿಯಾ ಸ್ವಯಂ ಸೇವಾ ಸಂಸ್ಥೆಗೆ ಸಲಕರಣೆಗಳ ಪೂರೈಕೆಯ ಜವಾಬ್ದಾರಿ ನೀಡಿದೆ.

**ಮುಖ್ಯಾಂಶಗಳು**

- ಅಂಗವಿಕಲ ಮಕ್ಕಳ ಕ್ಷೇಯೋಭಿವೃದ್ಧಿಗಾಗಿ ಕೆಲಸ ಮಾಡುವ ಮಾರ್ಗದರ್ಶಿ
- ಮೊಬಿಲಿಟಿ ಇಂಡಿಯಾ ಸ್ವಯಂ ಸೇವಾ ಸಂಸ್ಥೆಗೆ ಪೂರೈಕೆ ಜವಾಬ್ದಾರಿ

'ವಿವಿಧ ವಯಸ್ಸಿನ ಮಕ್ಕಳಿಗೆ, ಅವರ ಅಳತೆಗೆ ತಕ್ಕಂತಹ ಸಾಧನಗಳನ್ನು ತಯಾರಿಸಬೇಕಾಗಿರುವುದರಿಂದ ಮಕ್ಕಳನ್ನು ಕರೆದುಕೊಂಡು ಬಂದು ಅಳತೆ ಮಾಡಬೇಕಾಗುತ್ತದೆ. ಇದಕ್ಕಾಗಿ ವಿಶೇಷ ಶಿಬಿರವನ್ನು ಆಯೋಜಿಸಿದ್ದೇವೆ. ಮಂಗಳವಾರ ಶಿಬಿರ ಆರಂಭವಾಗಿದ್ದು, ಶುಕ್ರವಾರದವರೆಗೂ ನಡೆಯಲಿದೆ. ಮೊಬಿಲಿಟಿ ಇಂಡಿಯಾ ಸಂಸ್ಥೆಯವರು ಬಂದು ಅಂಗವಿಕಲ ಮಕ್ಕಳ ಅಳತೆ ತೆಗೆದುಕೊಂಡು, ಆ ಸಲಕರಣೆಗಳನ್ನು ಬೆಂಗಳೂರಿನಲ್ಲಿ ತಯಾರಿಸಿ ನಮಗೆ ಪೂರೈಸಲಿದ್ದಾರೆ' ಎಂದು ಮಾರ್ಗದರ್ಶಿ ಸಂಸ್ಥೆಯ ಜಿಲ್ಲಾ ಸಂಚಾಲಯಕ ಸತ್ಯನಾರಾಯಣ ಹೆಗಡೆ ಅವರು 'ಪ್ರಜಾವಾಣಿ'ಗೆ ತಿಳಿಸಿದರು. 'ಒಂದೊಂದು ಮಗುವಿಗೂ ಒಂದೊಂದು ಅಳತೆಯ ಸಲಕರಣೆ ಬೇಕಾಗುತ್ತದೆ. ಉದಾಹರಣೆಗೆ ಹಿಮ್ಮಡಿ ಕಾಲಿನ ಸಮಸ್ಯೆ ಹೊಂದಿರುವ ಮಗುವಿಗೆ ನಡೆದಾಡುವುದಕ್ಕೆ ನೆರವಾಗುವುದಕ್ಕಾಗಿ ಮೊಣಕಾಲಿನಿಂದಲೇ ಬಲವನ್ನು ನೀಡುವಂತಹ ಸಲಕರಣೆ ಬೇಕು. ಇದನ್ನು ಆ ಮಗುವಿನ ಕಾಲಿನ ಅಳತೆ ಪಡೆಯದೆ ಮಾಡಲು ಸಾಧ್ಯವಿಲ್ಲ. ಪ್ಲಾಸ್ಟರ್ ಆಫ್ ಪ್ಯಾರಿಸ್ ಅನ್ನು ಮಗುವಿನ ಕಾಲಿಗೆ ಹಾಕಿ, ಅಚ್ಚು ತೆಗೆದು ನಂತರ ಇದನ್ನು ಬಳಸಿಕೊಂಡು ಸಲಕರಣೆ ತಯಾರಿಸಲಾಗುತ್ತದೆ' ಎಂದು ರಂಜಿತಾ ತಿಳಿಸಿದರು.



ಶಿಬಿರದಲ್ಲಿ ಅಂಗವಿಕಲ ಬಾಲಕನೊಬ್ಬನ ಕಾಲಿಗೆ ಪ್ಲಾಸ್ಟರ್ ಆಫ್ ಪ್ಯಾರಿಸ್ ಹಾಕಿ ಕಾಲಿನ ಅಳತೆಯ ಅಚ್ಚು ತೆಗೆಯುತ್ತಿರುವ ತಜ್ಞರು

---

ಬೆವರ ಹನಿ

19 BH TUM PAGE2
19 Jun 2021

# ಅಂಗವಿಕಲರು, ಕಿಶೋರಿಯರಿಗೆ ಫುಡ್ ಕಿಟ್




ಚಿಕ್ಕನಾಯಕನಹಳ್ಳಿ ಪಟ್ಟಣದಲ್ಲಿ ಮೊಬಿಲಿಟಿ ಇಂಡಿಯಾ ಸಂಸ್ಥೆಯವರು ತಾಲ್ಲೂಕಿನ ಅಂಗವಿಕಲರು ಮತ್ತು ಕಿಶೋರಿಯರಿಗೆ ಫುಡ್ ಕಿಟ್, ಆರೋಗ್ಯ ಕಿಟ್ ಮತ್ತು ಕಿಶೋರಿಯರಿಗೆ ಸ್ಯಾನಿಟರಿ ನ್ಯಾಪ್ಕಿನ್ಸ್ ವಿತರಿಸಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಾಗರತ್ನ, ಶಿಶು ಅಭಿವೃದ್ಧಿ ಯೋಜನೆಯ ಮೇಲ್ವಿಚಾರಕಿ ಬಿ.ರೇಖಾ, ಪೋಷಣ್ ಅಭಿಯಾನದ ಸಹ ಸಂಯೋಜಕ ಶಿವಪ್ರಸಾದ್ ಹಾಗು ಅಂಗನವಾಡಿ ಕಾರ್ಯಕರ್ತೆಯರಿದ್ದರು.

---

ಪ್ರಜಾವಾಣಿ 2

ಚಾಮರಾಜನಗರ

ಶುಕ್ರವಾರದ ಉಷ್ಣಾಂಶ 27° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ

2 ಶುಕ್ರವಾರ • ನವೆಂಬರ್ 8, 2019

ಜಿಲ್ಲಾಮಟ್ಟದ ಮಕ್ಕಳ ಸಂಸತ್‌ನಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ

# ಮಕ್ಕಳ ಹಕ್ಕುಗಳ ಸಂಸತ್ ಪ್ರಯೋಜನಕ್ಕೆ ಸಲಹೆ



ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ ಉದ್ಘಾಟಿಸಿದರು

**ಸಮಸ್ಯೆ, ಹಕ್ಕು ಬಿಚ್ಚಿಟ್ಟ ವಿದ್ಯಾರ್ಥಿಗಳು**

---

ರೇಷ್ಮೆನಾಡು

ಸಂಪಾದಕರು: ಸವಿತಾಜಯಂತ್
email - reshmenadudaily@gmail.com

ಜಿಲ್ಲಾ ಜನಪರ ದಿನ ಪತ್ರಿಕೆ

ಜಾಹೀರಾತುಗಳಿಗಾಗಿ ಸಂಪರ್ಕಿಸಿ 08226–222623 9901565365

Postal Reg.No.KA/SK/NJD-329/2018-2020 KAR/KAN/P/RNI-NO-58162 ಚಾಮರಾಜನಗರ 08–11–2019 ಶುಕ್ರವಾರ ಫೋ: 222623 ಪುಟ–4 ರೂ.2

# ಮಕ್ಕಳಿಂದ ಸಮಾಜದ ಸುಧಾರಣೆ ಸಾಧ್ಯ: ಜಿ.ಪಂ ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ



# ವಿಕಲಚೇತನ ಮಕ್ಕಳಿಗೆ ಸಾಧನ ಸಲಕರಣೆಗಳ ವಿತರಣೆ




ಚಾಮರಾಜನಗರ: ಮೊಬಿಲಿಟಿ ಇಂಡಿಯಾ ಸಂಸ್ಥೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ದೈಹಿಕ ಮತ್ತು ದೃಷ್ಟಿದೋಷವುಳ್ಳ ವಿಕಲಚೇತನ ಮಕ್ಕಳಿಗೆ ಸಹಾಯಕ ಸಾಧನ ಸಲಕರಣೆಗಳನ್ನು ವಿತರಿಸಲಾಯಿತು.

ನಗರದಲ್ಲಿರುವ ಮೊಬಿಲಿಟಿ ಇಂಡಿಯಾ ಸಂಸ್ಥೆಯ ಕಚೇರಿ ಆವರಣದಲ್ಲಿ ನಡೆದ ಸಲಕರಣೆಗಳ ವಿತರಣೆ ಶಿಬಿರದಲ್ಲಿ 37 ವಿಕಲಚೇತನ ಮಕ್ಕಳಿಗೆ ಬೆಳವಣಿಗೆ ಹಂತದ ಸಾಧನ ಸಲಕರಣೆಗಳು, ಚಲನ ವಲನ ಮತ್ತು ಸಹಾಯಕ ಸಾಧನ ಸಲಕರಣೆಗಳು ಮತ್ತು ಕನ್ನಡಕವನ್ನು ವಿತರಿಸಲಾಯಿತು.

ವಿತರಣೆ ಮಾಡಿದ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ. ಶ್ರೀಧರ ಮಾತನಾಡಿ, ವಿಕಲಚೇತನ ಮಕ್ಕಳಿಗೆ ಮೊಬಿಲಿಟಿ ಇಂಡಿಯಾ ಸಂಸ್ಥೆಯು ನೀಡುತ್ತಿರುವ ಪುನರ್ವಸತಿ ಸೇವೆಗಳು ವಿಕಲಚೇತನ ಮಕ್ಕಳ ಬೆಳವಣಿಗೆಗೆ ಪೂರಕವಾಗಿವೆ. ಪೋಷಕರು ಇದರ ಪ್ರಯೋಜನ ಪಡೆದು ಮಕ್ಕಳ ಅಭಿವೃದ್ಧಿಗೆ ಸಹಕರಿಸಬೇಕು ಎಂದರು.

ಮೊಬಿಲಿಟಿ ಇಂಡಿಯಾ ಸಂಸ್ಥೆಯ ವ್ಯವಸ್ಥಾಪಕ ಎಸ್.ಎನ್.ಆನಂದ್ ಮಾತನಾಡಿದರು. ಸಾರ್ವಜನಿಕ ಶಿಕ್ಷಣ ಇಲಾಖೆಯ ಬಿ.ಐ.ಇ.ಆರ್.ಟಿ ರೆಬೆಲ್ಲೋ ಮಾತನಾಡಿದರು. ಸಂಸ್ಥೆಯ ಸಂಯೋಜಕ ರಾಜಣ್ಣ, ಪ್ರೋಸ್ಥೆಟಿಕ್ಸ್ ಮತ್ತು ಆರ್ಥೋಟಿಕ್ಸ್ ತಂತ್ರಜ್ಞರಾದ ಸುಧಾಕರ್, ನಾಗಮ್ಮ, ಕುಮಾರ ಮತ್ತು ಪ್ರತಾಪ್, ಫಿಜಿಯೋ ಥೆರಪಿಸ್ಟ್ ಅರುಣ್, ಮಂಜುಳಾ, ರಾಜು, ಮಹದೇವಸ್ವಾಮಿ ಹಾಜರಿದ್ದರು.


ಬೆಂಗಳೂರು | ಬೆಂಗಳೂರು ಗ್ರಾ. | ತುಮಕೂರು | ಚಿಕ್ಕಬಳ್ಳಾಪುರ | ಕೋಲಾರ | ರಾಮನಗರ | ಮಂಡ್ಯ | ಮೈಸೂರು | ಚಿತ್ರದುರ್ಗ | ದಾವಣಗೆರೆ | ಬಳ್ಳಾರಿ | ಶಿವಮೊಗ್ಗ | ಹಾಸನ | ಹಾವೇರಿ



ಸುವರ್ಣ ಟೈಮ್ಸ್ ಆಫ್ ಕರ್ನಾಟಕ

ನಾಡಿನ ಹೆಮ್ಮೆ — ಕನ್ನಡ ದಿನಪತ್ರಿಕೆ

ಪ್ರಧಾನ ಸಂಪಾದಕ ಕೆ.ಎಸ್. ಭಾಸ್ಕರ್ ಶೆಟ್ಟಿ ಸಾರಥ್ಯದಲ್ಲಿ, 10ನೇ ವರ್ಷ...

ಸಂಪುಟ 10 | ಸಂಚಿಕೆ 235 | ಬೆಂಗಳೂರು | ಶುಕ್ರವಾರ | 16 ಜುಲೈ 2021 | ಪುಟ-8 | ₹ 3 | e-paper: www.suvarnatimesofkarnataka.com


# ಮಕ್ಕಳಿಗೆ ಆರೋಗ್ಯ ತಪಾಸಣೆ ಹಾಗೂ ಮಾತಿನ ತರಬೇತಿ ಶಿಬಿರ

**ಚಿಕ್ಕನಾಯಕನಹಳ್ಳಿ:** ಪಟ್ಟಣದ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ವಾಕ್ ಮತ್ತು ಶ್ರವಣ ನ್ಯೂನತೆಯುಳ್ಳ ಮಕ್ಕಳಿಗೆ ಆರೋಗ್ಯ ತಪಾಸಣೆ ಹಾಗೂ ಮಾತಿನ ತರಬೇತಿ ಶಿಬಿರವನ್ನು ಆಯೋಜಿಸಲಾಗಿತ್ತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗು ಮೊಬಿಲಿಟಿ ಇಂಡಿಯಾ ಇವರ ಸಹಯೋಗದಲ್ಲಿ ಕಾರ್ಯಕ್ರಮ ನಡೆಯಿತು.

ವಾಕ್ ಮತ್ತು ಶ್ರವಣ ನ್ಯೂನತೆಯುಳ್ಳ ಮಕ್ಕಳ ಮೂಲಭೂತ ಸಮಸ್ಯೆಗಳನ್ನು ಗುರುತಿಸಿ, ಅವರಿಗೆ ಅಗತ್ಯವಿರುವ ಸಾಧನ ಸಲಕರಣೆಗಳನ್ನು ವಿತರಿಸಲಾಯಿತು. ಮಕ್ಕಳಿಗೆ ದೈನಂದಿನ ಚಟುವಟಿಕೆಗಳಿಗೆ ಅನುಕೂಲವಾಗುವ ಸಾಧನಗಳನ್ನು ನೀಡುವುದು.

ಈ ಮೂಲಕ ಅವರ ಸಾಮಾಜಿಕ, ಆರ್ಥಿಕ ಅಭಿವೃದ್ಧಿಗೆ ನೆರವಾಗುವ ಆಶಯ ಹೊಂದಲಾಗಿದೆ. ಶಿಬಿರದಲ್ಲಿ ಒಟ್ಟು 50 ಮಕ್ಕಳು ಭಾಗವಹಿಸಿದ್ದರು.

ಆಡಿಯೋಲಾಜಿಸ್ಟ್ ಪ್ರವೀಣ್, ಲಾಂಗ್ವೇಜ್ ಪೆಥಾಲಜಿಸ್ಟ್ ಜುಮ್ನಾ, ಹಿಯರಿಂಗ್ ಎಕ್ಸ್‌ಪರ್ಟ್ ಸಿ.ಬಿ., ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಾಗರತ್ನ, ಮೇಲ್ವಿಚಾರಕಿ ರೇಖಾ ಸೇರಿದಂತೆ ಇತರರಿದ್ದರು.




ತುಮಕೂರು ವಾರ್ತೆ

PAGE 04

19 Dec 2021


# ವಿಶೇಷ ಚೇತನರಿಗೆ ಸಾಧನ ಸಲಕಣೆ ವಿತರಣೆ



**ಹುಳಿಯಾರು: ವೊಬಿಲಿಟಿ ಇಂಡಿಯಾ, ಸಾರ್ವಜನಿಕರ ಶಿಕ್ಷಣ ಇಲಾಖೆ. ವಿಕಲಚೇತನರ ಕಲ್ಯಾಣ ಇಲಾಖೆ ಹಾಗೂ ಗ್ರಾಮ ಪಂಚಾಯಿತಿ ಸಹಯೋಗದಲ್ಲಿ ಕಂದಿಕೆರೆ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ದೈಹಿಕ ವಿಕಲಚೇತನಮಕ್ಕಳಿಗೆ ಅಗತ್ಯ ವಿರುವ ವಿವಿದ ರೀತಿಯ ಸಾಧನ ಸಲಕರಣೆಗಳನ್ನು ವಿತರಿಸಲಾಯಿತು.**

ಈ ಶಿಬಿರದಲ್ಲಿ 25 ಮಕ್ಕಳಿಗೆ ವಿವಿಧ ರೀತಿಯ ಸಾಧನ ಸಲಕರಣೆಗಳನ್ನು ಗ್ರಾಪಂ ಅಧ್ಯಕ್ಷರಾದ ಸವಿತ, ಮುಖ್ಯೋಪಾಧ್ಯಾಯ ನಟರಾಜ್, ಮೊಬಿಲಿಟಿ ಇಂಡಿಯಾ ಸಂಸ್ಥೆಯ ವ್ಯವಸ್ಥಾಪಕರಾದ ಎಸ್.ಎನ್.ಆನಂದ್ ವಿತರಿಸಿದರು.

ಈ ಸಂದರ್ಭದಲ್ಲಿ ಗ್ರಾಪಂ ಕಾರ್ಯದರ್ಶಿ ಸೌಹಾರ್ದ, ಸಂಯೋಜಕ ಜಾನ್, ಆರೋಗ್ಯ ಕಾರ್ಯಕರ್ತರಾದ ಆರ್.ಸುಧಾಮಣಿ, ಮಹಾದೇವಸ್ವಾಮಿ, ರಾಜು, ಫಿಜಿಯೋ ಥೆರಪಿಸ್ಟ್ ಸಂಜೀವಿನಿ ಟೆಕ್ನೀಷಿನ್ಸ್ ರಂಜಿತ, ರುಮಾನ, ಕುಮಾರ, ಹೇಮನಾಥನ್, ಶೋರುಕ್, ನಂದಾ, ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಾದ ಕೆ.ಜಿ.ಮಮತಾ, ಲಲಿತ, ಧನಂಜಯ, ಇದ್ದರು.

# ಗ್ರಾಹಕರು ವಸ್ತುಗಳನ್ನು ಖರೀದಿಸುವ ಮುನ್ನ ಎಚ್ಚರಿಕೆ ಅಗತ್ಯ

## ಸತ್ರ ನ್ಯಾಯಾಧೀಶೆ ಬಿ.ಎಸ್.ಭಾರತಿ ಸಲಹೆ

» ಪ್ರಜಾಸತ್ಯ ವಾರ್ತೆ

**ಚಾಮರಾಜನಗರ:** ಗ್ರಾಹಕರು ಯಾವುದೇ ವಸ್ತುಗಳನ್ನು ಖರೀದಿಸುವ ಮುನ್ನ ಎಚ್ಚರಿಕೆ ಅಗತ್ಯ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಬಿ.ಎಸ್.ಭಾರತಿ ಅಭಿಪ್ರಾಯಪಟ್ಟರು.

ನಗರದ ಜಿಲ್ಲಾಡಳಿತ ಭವನದ ಹಳೆಯ ಕೆಡಿಪಿ ಸಭಾಂಗಣದಲ್ಲಿ ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಹಾಗೂ ಮೊಬಿಲಿಟಿ ಇಂಡಿಯಾ ಸಹಯೋಗದಲ್ಲಿ ವಿಶ್ವ ಗ್ರಾಹಕರ ಹಕ್ಕುಗಳ ದಿನ ಅಂಗವಾಗಿ ಆಯೋಜಿಸಿದ್ದ ಪ್ರಾಧಿಕಾರದ ಕಾನೂನು ಸ್ವಯಂ ಸೇವಕರಿಗೆ ಅಧ್ಯಕ್ಷಾ ಸಹಾಯಕ ಸಾಧನ ಸಲಕರಣೆಗಳ ಕುರಿತು ಅರಿವು ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಸರಕು, ಸೇವೆಗಳನ್ನು ಪಡೆಯುವ ಪ್ರತಿಯೊಬ್ಬರು ಗ್ರಾಹಕರಾಗಿದ್ದಾರೆ. ಯಾವುದೇ ವಸ್ತುಗಳನ್ನು ಖರೀದಿಸುವ ಮುನ್ನ ಆ ವಸ್ತುವಿನ ಅವಧಿಯು ಮುಗಿಯುವ ದಿನಾಂಕವನ್ನು ಗಮನಿಸಬೇಕು. ಅವಧಿ ಮುಗಿದ ವಸ್ತುಗಳನ್ನು ಖರೀದಿಸಿ ಬಳಸಿದಾಗ ಅದು ನಮ್ಮ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಈ ನಿಟ್ಟಿನಲ್ಲಿ ಗ್ರಾಹಕರು ಕಾಳಜಿ ವಹಿಸುವುದು ಅಗತ್ಯ. ಅಲ್ಲದೇ ಮಕ್ಕಳು ಸಹ ಯಾವುದೇ ತಿಂಡಿ, ತಿನಿಸುಗಳನ್ನು ಖರೀದಿಸುವ ಮುನ್ನ ಜಾಗೃತಿವಹಿಸಬೇಕು ಎಂದರು.

ಯಾವುದೇ ವಸ್ತುಗಳನ್ನು ಖರೀದಿಸಿದಾಗಲೂ ಅದಕ್ಕೆ ಸಂಬಂಧಿಸಿದಂತೆ ರಶೀತಿ ಪಡೆದುಕೊಳ್ಳುವುದು ಮುಖ್ಯ. ಇದರಿಂದ ವಸ್ತುಗಳಲ್ಲಿ ದೋಷ ಕಂಡುಬಂದರೆ ಅದನ್ನು ಬದಲಾಯಿಸಲು ಅಥವಾ ಆಗಿರುವ ಮೋಸಕ್ಕೆ ಸೂಕ್ತ ನ್ಯಾಯ ಪಡೆಯಲು ಅಗತ್ಯವಾಗುತ್ತದೆ. ಸರ್ಕಾರವು ವಿಶೇಷ ಚೇತನರಿಗೆ ಸಾಕಷ್ಟು ಯೋಜನೆಗಳನ್ನು ರೂಪಿಸಿದೆ. ಅನೇಕ ಸಲಕರಣೆಗಳನ್ನು ಉಚಿತವಾಗಿ ಕೊಡುವ ವ್ಯವಸ್ಥೆಯೂ ಇದೆ. ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಮಾತನಾಡಿ, ಗ್ರಾಹಕರು ಆಸೆ, ಆಮಿಷಗಳಿಗೆ ಒಳಗಾಗಿ ನ್ಯೂನತೆ ಇರುವ ವಸ್ತುಗಳನ್ನು ಖರೀದಿಸಿದರೆ ತೊಂದರೆ ಅನುಭವಿಸಬೇಕಾಗುತ್ತದೆ. ವಸ್ತುಗಳನ್ನು ಖರೀದಿಸಿದಾಗ ಸೂಕ್ತ ರಶೀತಿ ಪಡೆದುಕೊಳ್ಳಬೇಕು. ಆಗ ವಸ್ತುಗಳಲ್ಲಿ ಏನಾದರೂ ನ್ಯೂನತೆ ಕಂಡುಬಂದರೆ ಕಂಪನಿ ಅಥವಾ ಮಾಲೀಕರ ವಿರುದ್ಧ ಗ್ರಾಹಕರ ನ್ಯಾಯಾಲಯದಲ್ಲಿ ಕೇಸು ದಾಖಲಿಸಬಹುದು. ವಸ್ತುಗಳ ಖರೀದಿಯಲ್ಲಿ ಮಹಿಳೆಯರು ಹೆಚ್ಚು ಮೋಸ ಹೋಗುತ್ತಿರುವುದು ಕಂಡು ಬರುತ್ತಿದೆ. ಆದ್ದರಿಂದ ಮಹಿಳೆಯರು ಯಾವುದೇ ವಸ್ತುಗಳನ್ನು ಖರೀದಿಸುವ ಮುನ್ನ ಎಚ್ಚರಿಕೆ ವಹಿಸುವುದು ಅಗತ್ಯ ಎಂದು ಹೇಳಿದರು.

ಈ ವೇಳೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಶ್ರೀಧರ್, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಪ್ರಭಾರ ಅಧ್ಯಕ್ಷ ಎಸ್.ಎಸ್.ಶ್ರೀನಿಧಿ, ಮೊಬಿಲಿಟಿ ಇಂಡಿಯಾದ ಕಾರ್ಯಕ್ರಮ ವ್ಯವಸ್ಥಾಪಕ ಎಸ್.ಎಸ್.ಆನಂದ್, ಕಾರ್ಮಿಕ ಇಲಾಖೆ ವೀಣಾ ಇತರರಿದ್ದರು.



ಚಾಮರಾಜನಗರದ ಜಿಲ್ಲಾಡಳಿತ ಭವನದ ಹಳೆಯ ಕೆಡಿಪಿ ಸಭಾಂಗಣದಲ್ಲಿ ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಹಾಗೂ ಮೊಬಿಲಿಟಿ ಇಂಡಿಯಾ ಸಹಯೋಗದಲ್ಲಿ ವಿಶ್ವ ಗ್ರಾಹಕರ ಹಕ್ಕುಗಳ ದಿನ ಅಂಗವಾಗಿ ಆಯೋಜಿಸಿದ್ದ ಪ್ರಾಧಿಕಾರದ ಕಾನೂನು ಸ್ವಯಂ ಸೇವಕರಿಗೆ ಅಧ್ಯಕ್ಷಾ ಸಹಾಯಕ ಸಾಧನ ಸಲಕರಣೆಗಳ ಕುರಿತು ಅರಿವು ಕಾರ್ಯಾಗಾರವನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ಬಿ.ಎಸ್.ಭಾರತಿ ಉದ್ಘಾಟಿಸಿದರು.

> ಯಾವುದೇ ವಸ್ತುಗಳನ್ನು ಖರೀದಿಸಿದಾಗಲೂ ಅದಕ್ಕೆ ಸಂಬಂಧಿಸಿದಂತೆ ರಶೀತಿ ಪಡೆದುಕೊಳ್ಳುವುದು ಮುಖ್ಯ. ಇದರಿಂದ ವಸ್ತುಗಳಲ್ಲಿ ದೋಷ ಕಂಡುಬಂದರೆ ಅದನ್ನು ಬದಲಾಯಿಸಲು ಅಥವಾ ಆಗಿರುವ ಮೋಸಕ್ಕೆ ಸೂಕ್ತ ನ್ಯಾಯ ಪಡೆಯಲು ಅಗತ್ಯವಾಗುತ್ತದೆ.
>
> **-ಬಿ.ಎಸ್.ಭಾರತಿ,**
> ಸತ್ರ ನ್ಯಾಯಾಧೀಶೆ

---

VK ವಿಜಯ ಕರ್ನಾಟಕ e-paper

# ವಿಶೇಷ ಮಕ್ಕಳ ಪೋಷಕರಿಗೆ ಅರಿವು

■ **ವಿಕ ಸುದ್ದಿಲೋಕ** ಚಾಮರಾಜನಗರ

ಮೊಬಿಲಿಟಿ ಇಂಡಿಯಾ ಸಂಸ್ಥೆಯು ರೋಟರಿ ಸಂಸ್ಥೆ ಸಹಕಾರದೊಂದಿಗೆ ವಿಶೇಷಚೇತನ ಮಕ್ಕಳ ಪೋಷಕರಿಗೆ 'ಮೆದುಳು ಪಕ್ಷಘಾತವುಳ್ಳ ಮಕ್ಕಳ ನಿರ್ವಹಣೆ' ಕುರಿತ ಅರಿವು ಕಾರ್ಯಕ್ರಮ ಆಯೋಜಿಸಿತ್ತು.

ನಗರದ ರೋಟರಿ ಭವನದಲ್ಲಿ ನಡೆದ ಕಾರ್ಯಕ್ರಮವನ್ನು ರೋಟರಿ ಅಧ್ಯಕ್ಷ ಶ್ರೀನಿವಾಸ್ ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಅವರು, ವಿಶೇಷಚೇತನ ಮಕ್ಕಳ ಪೋಷಕರು ತಮ್ಮ ಮಕ್ಕಳ ಆರೋಗ್ಯ ಸಂರಕ್ಷಣೆ ಮಾಡುವ ಜತೆಗೆ ಅವರಲ್ಲಿ ಆತ್ಮವಿಶ್ವಾಸ ಮೂಡಿಸಿ ಶೈಕ್ಷಣಿಕ ಅಭಿವೃದ್ಧಿಗೆ ಸಹಕಾರಿಯಾಗಬೇಕೆಂದು ಸಲಹೆ ನೀಡಿದರು.

ಮೊಬಿಲಿಟಿ ಇಂಡಿಯಾ ಸಂಸ್ಥೆಯ ವ್ಯವಸ್ಥಾಪಕ ಎಸ್.ಎಸ್. ಆನಂದ್ ಮಾತನಾಡಿ, ಸಂಸ್ಥೆಯು ನೀಡುವ ಶೈಕ್ಷಣಿಕ ಮತ್ತು ಪುನರ್ವಸತಿ ಸೇವೆಗಳನ್ನು ಸರಿಯಾಗಿ ಬಳಸಿಕೊಳ್ಳಬೇಕು ಮತ್ತು ಸರಕಾರದ ಯೋಜನೆಗಳು ವಿಶೇಷಚೇತನ ಮಕ್ಕಳಿಗೆ ದೊರೆಯುವ ನಿಟ್ಟಿನಲ್ಲಿ ಪೋಷಕರು ಪ್ರಯೋಜನ ಪಡೆದುಕೊಳ್ಳಬೇಕು ಎಂದರು.



ಚಾಮರಾಜನಗರದ ರೋಟರಿ ಭವನದಲ್ಲಿ ಮೊಬಿಲಿಟಿ ಇಂಡಿಯಾ ಸಂಸ್ಥೆ ವತಿಯಿಂದ ವಿಶೇಷಚೇತನ ಮಕ್ಕಳ ಪೋಷಕರಿಗೆ ನಡೆದ ಅರಿವು ಕಾರ್ಯಕ್ರಮವನ್ನು ರೋಟರಿ ಸಂಸ್ಥೆ ಅಧ್ಯಕ್ಷ ಶ್ರೀನಿವಾಸ್ ಉದ್ಘಾಟಿಸಿದರು.

ಚಾಮರಾಜನಗರ ಗ್ರಾಮಾಂತರ ಠಾಣೆ ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಪುಟ್ಟಸ್ವಾಮಿ ಮಾತನಾಡಿ, ವಿಶೇಷಚೇತನ ಮಕ್ಕಳನ್ನು ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ನಾವೆಲ್ಲರೂ ಒಗ್ಗೂಡಿ ಕಾರ್ಯನಿರ್ವಹಿಸಬೇಕು ಮತ್ತು ಇಲಾಖೆ ಮತ್ತು ಅಭಿಮಾನಿ ಬಳಗದಿಂದ ದೊರೆಯುವ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಾಗಿ ತಿಳಿಸಿದರು.

ಈ ತರಬೇತಿಯ ಸಂಪನ್ಮೂಲ ವ್ಯಕ್ತಿಯಾದ ಚಾಂದ್ ಪಾಷ ಮಾತನಾಡಿ, ಮೆದುಳು ಪಕ್ಷಘಾತವುಳ್ಳ ಮಕ್ಕಳ ಗುಣಲಕ್ಷಣಗಳು, ಕಾರಣಗಳು, ದೈನಂದಿನ ಚಟುವಟಿಕೆಗಳು ಮತ್ತು ಅವುಗಳ ನಿರ್ವಹಿಸುವ ವಿಧಾನಗಳು, ನಾನಾ ರೀತಿಯ ಭಂಗಿಗಳ ಪರಿಕಯ, ಮನೆಯಲ್ಲೇ ಚಟುವಟಿಕೆಗಳ ಮೂಲಕ ಸರಳ ವ್ಯಾಯಾಮಗಳು ಮತ್ತು ವೈಯಕ್ತಿಕ ಸ್ವಚ್ಛತೆ ಬಗ್ಗೆ ತಿಳಿಸಿಕೊಟ್ಟರು.

ಮೊಬಿಲಿಟಿ ಇಂಡಿಯಾ ಸಂಸ್ಥೆಯ ಸಂಯೋಜಕ ರಾಜಣ್ಣ , ರೇಷ್ಮಾ, ಪ್ರೊಸ್ಥೆಟಿಕ್ಸ್ ಮತ್ತು ಆರ್ಥೋಟಿಕ್ಸ್ ತಂತ್ರಜ್ಞ ಕುಮಾರ್ ಮತ್ತು ಫಿಜಿಯೋ ತೆರಪಿಸ್ಟ್ ಸಹಾಯಕರಾದ ರಾಜು ಮತ್ತು ಮಹದೇವಸ್ವಾಮಿ ಹಾಗೂ ಪೋಷಕರು ಹಾಜರಿದ್ದರು.

ಪ್ರಜಾವಾಣಿ

ಜಿಲ್ಲಾ ಪ್ರಧಾನ ನ್ಯಾಯಾಧೀಶರಾದ ಬಿ.ಎಸ್‌.ಭಾರತಿ

# ‘ಶಿಕ್ಷಣ ನೀತಿಯ ಸದುಪಯೋಗವಾಗಲಿ’

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ‘ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಶಿಕ್ಷಣ ಪಡೆದಂತೆ, ಜಾತಿ ಧರ್ಮದ ಬಗ್ಗೆ ಒಲವು ತೋರದೆ ನಾವೆಲ್ಲರೂ ಒಂದೇ ಎಂಬ ಭಾವನೆ ಬೆಳೆಸಿಕೊಳ್ಳಬೇಕು’ ಎಂದು ಎಂದು ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್‌.ಭಾರತಿ ಶುಕ್ರವಾರ ಹೇಳಿದರು.

ಜಿಲ್ಲಾಡಳಿತ ಭವನದ ಹಳೆ ಕೆ.ಡಿ.ಪಿ. ಸಭಾಂಗಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ, ಮೊಬಿಲಿಟಿ ಇಂಡಿಯಾ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ –2020ರಡಿ ಸಮನ್ವಯ, ಶಿಕ್ಷಣದ ಕುರಿತು ನಡೆದ ಕಾರ್ಯಾಗಾರದಲ್ಲಿ ಮಾತನಾಡಿದರು.

‘ನಾವು ಶಿಕ್ಷಣವನ್ನು ಸದುಪಯೋಗ ಪಡಿಸಿಕೊಳ್ಳುತ್ತಿಲ್ಲ. ಶಿಕ್ಷಣ ನೀತಿಯನ್ನು ಯಾವ ರೀತಿ ಬಳಸಿಕೊಳ್ಳಬೇಕು ಎಂಬ ಅರಿವಿರಬೇಕು. ಹೊಸ ನೀತಿಯನ್ನು ಯಾವ ಉದ್ದೇಶದಿಂದ ರೂಪಿಸಿದ್ದಾರೆ ಎನ್ನುವುದರ ಬಗ್ಗೆ ಗಮನ ಹರಿಸಬೇಕು. ಅದರಲ್ಲಿರುವ ಒಳ್ಳೆಯ ವಿಚಾರಗಳನ್ನು ಅನುಷ್ಠಾನಕ್ಕೆ ತರಬೇಕು. ಅದು ಬಿಟ್ಟು ಅದರಲ್ಲಿರುವಂತಹ ಹುಳುಕುಗಳನ್ನೇ ಹುಡುಕಬಾರದು’ ಎಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಶ್ರೀಧರ ಮಾತನಾಡಿ, ‘ಜನರ ಸರ್ವಾಂಗೀಣ ಅಭಿವೃದ್ಧಿಗೆ ಶಿಕ್ಷಣ ಮುಖ್ಯ. ಮಕ್ಕಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮುಖ್ಯವಾದುದು. ಇತ್ತೀಚಿನ ದಿನಗಳಲ್ಲಿ ಎಲ್ಲ ಉದ್ಯೋಗಗಳು ಮಾರಾಟಕ್ಕಿವೆ. ಆದ್ದರಿಂದ ಉತ್ತಮ ಶಿಕ್ಷಣ ನೀತಿ ಬಳಸಿಕೊಂಡು ಮಕ್ಕಳಲ್ಲಿ ಸ್ವಾವಲಂಬನೆ ಬೆಳೆಸುವ ವಾತಾವರಣ ಸೃಷ್ಟಿ ಮಾಡಬೇಕು’ ಎಂದರು.

ಬೆಂಗಳೂರಿನ ಸೇವಾ ಇನ್ ಆಕ್ಷನ್ ನಿರ್ದೇಶಕಿ ಮಂಜುಳ ನಂಜುಂಡಯ್ಯ ಮಾತನಾಡಿ, ‘ರಾಷ್ಟ್ರೀಯ ಶಿಕ್ಷಣ ನೀತಿಯು 21ನೇ ಶತಮಾನದ ಮೊದಲ ಶಿಕ್ಷಣ ನೀತಿಯಾಗಿದ್ದು, ನಮ್ಮ ದೇಶದ ಅನೇಕ ಅಭಿವೃದ್ಧಿ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸುವ ಗುರಿಯನ್ನು ಹೊಂದಿದೆ’ ಎಂದು ತಿಳಿಸಿದರು.

ಡಯಟ್ ಪ್ರಾಂಶುಪಾಲ ಎಚ್‌.ಕೆ.ಪಾಂಡು ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಣ ಇಲಾಖೆಯ ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿ ಮಂಜುನಾಥ್, ಮೊಬಿಲಿಟಿ ಇಂಡಿಯಾ ಕಾರ್ಯಕಾರಿಣಿ ನಿರ್ದೇಶಕಿ ಅಲ್ಬಿನಾ ಶಂಕರ್, ಕಾರ್ಯಕ್ರಮ ವ್ಯವಸ್ಥಾಪಕ ಎಸ್‌.ಎನ್‌.ಆನಂದ್, ಡಯಟ್‌ನ ಹಿರಿಯ ಉಪನ್ಯಾಸಕ ಸ್ವಾಮಿ ಇದ್ದರು.



ನೂತನ ಶಿಕ್ಷಣ ನೀತಿಗೆ ಸಂಬಂಧಿಸಿದ ಕಾರ್ಯಾಗಾರವನ್ನು ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್‌.ಭಾರತಿ ಅವರು ಗಿಡಕ್ಕೆ ನೀರೆರೆಯುವುದರ ಮೂಲಕ ಉದ್ಘಾಟಿಸಿದರು. ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಶ್ರೀಧರ ಇದ್ದರು

---

# ಚಾಮರಾಜನಗರ

ಕನ್ನಡಪ್ರಭ

ಶನಿವಾರ 17.9.2022

ಹೆಚ್ಚಿನ ಸುದ್ದಿಗಳು ಪುಟ 12 ರಲ್ಲಿ







ಎಲ್ಐಸಿ ಉಪಶಾಖೆಗೆ ಮಾಧು, ಲಿಂಗಪ್ಪನೇಮಕ

# ನಾವೆಲ್ಲರೂ ಒಂದೇ ಎಂಬ ಭಾವನೆ ಮೂಡಿಸಬೇಕು

ನ್ಯಾಯಾಧೀಶೆ.ಬಿ.ಎಸ್.ಭಾರತಿ ಸಲಹೆ | ರಾಷ್ಟ್ರೀಯ ಶಿಕ್ಷಣ ನೀತಿ: 2020ರಡಿ ಸಮನ್ವಯ ಶಿಕ್ಷಣ ಕುರಿತು ಕಾರ್ಯಾಗಾರ





---

# ವಿಕಲಚೇತನ ಮಕ್ಕಳಿಗೆ ಅಗತ್ಯ ಸಾಧನ ಸಲಕರಣೆಗಳ ವಿತರಣೆ



ಹುಳಿಯಾರು: ಮೊಬಿಲಿಟಿ ಇಂಡಿಯಾ ಸಂಸ್ಥೆಯ ಸಮುದಾಯ ಆಧಾರಿತ ಸಮನ್ವಯ ಅಭಿವೃದ್ಧಿ ಕಾರ್ಯಕ್ರಮ ಹಾಗೂ ಪಟ್ಟಣ ಪಂಚಾಯಿತಿ, ಹುಳಿಯಾರು ಇವರ ಸಹಯೋಗದೊಂದಿಗೆ ದೈಹಿಕ ವಿಕಲಚೇತನ ಮಕ್ಕಳಿಗೆ ಅಗತ್ಯ ಸಾಧನ ಸಲಕರಣೆಗಳ ನಾಲ್ಕನೇ ಹಂತದ ಅಳವಡಿಕೆ ಕಾರ್ಯಕ್ರಮವನ್ನು ಹುಳಿಯಾರಿನ ವಾಸವಿ ಕಲ್ಯಾಣ ಮಂದಿರದಲ್ಲಿ ಆಯೋಜಿಸಲಾಗಿತ್ತು.

ಈ ಸಂದರ್ಬದಲ್ಲಿ ಮೊಬಿಲಿಟಿ ಇಂಡಿಯಾದ ಅಧ್ಯಕ್ಷರಾದ ಡಾ.ಗೀಫ್ಟ್‌ನಾರ್ಮನ್ ಮಾತನಾಡಿ ವಿಕಲಚೇತನರಿಗೆ ಸಾಧನ ಸಲಕರಣೆಗಳನ್ನ ನೀಡುವುದರ ಜೊತೆಗೆ ಆತ್ಮಸ್ಥೈರ್ಯವನ್ನು ನೀಡಬೇಕೆಂದು ಕರೆನೀಡಿದರು.

ಪಪಂ ಮುಖ್ಯಾಧಿಕಾರಿ ಡಿ.ಭೂತಪ್ಪ ಮಾತನಾಡಿ ಪಟ್ಟಣ ಪಂಚಾಯಿತಿ ಎಲ್ಲಾ ವಿಕಲ ಚೇತನರನ್ನು ಗುರುತಿಸಿದ್ದು ಅಗತ್ಯ ಸೇವೆಗಳನ್ನು ಅನುದಾನದ ಅಡಿಯಲ್ಲಿ ಒದಗಿಸಲಾಗುವುದು ಎಂದು ತಿಳಿಸಿದರು.

ಮೊಬಿಲಿಟಿ ಇಂಡಿಯಾ ಇವರು ಸಂಸ್ಥೆಯ ವ್ಯವಸ್ಥಾಪಕ ಆನಂದ್ ಮಾತನಾಡಿ ತಾಲೂಕಿನಲ್ಲಿ ವಿಕಲ ಚೇತನ ಮಕ್ಕಳನ್ನು ಗುರುತಿಸಲಾಗಿದ್ದು ಎಲ್ಲಾ ಮಕ್ಕಳಿಗೆ ಪುನರ್ ವಸತಿ ಸೇವೆಗಳನ್ನು ಒದಗಿಸಲಾಗುವುದು ಎಂದು ತಿಳಿಸಿ ಇದರ ಸದುಪಯೋಗವನ್ನು ಎಲ್ಲರೂ ಮಕ್ಕಳು ಪಡೆದುಕೊಳ್ಳಬೇಕಾಗಿ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ 17 ಮಕ್ಕಳಿಗೆ 36 ವಿಭಿನ್ನ ರೀತಿಯ ಸಲಕರಣೆಗಳನ್ನು ಉಚಿತವಾಗಿ ನೀಡಲಾಯಿತು.

ಪಪಂ ಅಧ್ಯಕ್ಷ ಕೆಎಂಎಲ್ ಕಿರಣ್ ಕುಮಾರ್ ಉಪಾಧ್ಯಕ್ಷೆ ಶ್ರುತಿಸನತ್, ಆರ್ಯವೈಶ್ಯ ಮಂಡಳಿ ಜಿಲ್ಲಾಧ್ಯಕ್ಷ ಎಲ್.ಆರ್.ಚಂದ್ರಶೇಖರ್, ಸಂಸ್ಥೆಯ ಕಾರ್ಯದರ್ಶಿ ಕೆ.ಎಲ್.ವಿನಯ್, ಖಜಾಂಜಿ ನಾಗರಾಜ್, ಥೆರಪಿಸ್ಟ್ ಅರುಣಕುಮಾರ್, ತಂತ್ರಜ್ಞಾರಾದ ನರಸಿಂಹಲು, ರುಮನಾಖಾನ್, ಕುಮಾರ್ ಸಿಬ್ಬಂದಿ ಸುಧಾಮಣಿ, ರಾಜು ಉಪಸ್ಥಿತರಿದ್ದರು.

జ్యోతి
www.jyothidaily.com
19 May 2024
JYOTHI TELANGANA

పొందించుకోవాలని కోరారు. ఈ కార్యక్రమంలో జాజుల క్రాంతి. ముకేశ్ యాదవ్. అశోక్ ముదిరాజ్. సీతారాం. ముదిరాజ. మనా భాస్కరం. హామి. అనురాధ. విజయకుమార్. వేణు. వరప్రసాద్. పవన్ పాల్గొన్నారు.

# ఉచిత వైద్య శిబిరాలు సద్వినియోగం చేసుకోవాలి

బోయిన్‌పల్లి – జ్యోతిన్యూస్

లైన్స్ క్లబ్ ఆఫ్ హైదరాబాద్ ఆధ్వర్యంలో తిరుమలగిరి మొబిలిటీ ఇండియా సహకారంతో న్యూ బోయిన్‌పల్లి న్యూ సిటీ కాలనీ శ్రీ వెంకటేశ్వర స్వామి ఆలయంలో శారీరక బలహీనత వున్నా వ్యక్తుల కోసం ఏర్పాటు చేసిన ఉచిత వైద్య శిబిరాన్ని కంటోన్మెంట్ బోర్డు మాజీ ఉపాధ్యక్షులు జంపన ప్రతాప్ ముఖ్య అతిథిగా హాజరై ప్రారంభించారు. ఈ సందర్భంగా జంపన ప్రతాప్ మాట్లాడుతూ ఈ ఉచిత శిభిరం ద్వారా శారీరక బలహీనత వున్నా వ్యక్తులు పరీక్షలు చేయించు కుని సంబంధిత వైద్యుల సూచనల మేరకు వారి అవసరమైన పరికరాలు ఉచితంగా పొందవచ్చని అన్నారు. అవసరమైన పరికరాలు కొనుగోలు చేయాలంటే ఖర్చుతో కూడుకున్నందున ఈ సదవకాశాన్ని సద్వినియోగం చేసుకుని పరికరాలను ఉచితంగా పొందాలని అన్నారు ఈ శిభిరంను ఏర్పాటుచేసిన మొబిలిటీ ఇండియా నిర్వ



హకులను లయన్స్ క్లబ్ ప్రతినిధు లను జంపన ప్రతాప్ అభినందిచారు. ఈ కార్యక్రమములో మొబిలిటీ ఇండియా బృందం ఛైర్మెన్ సొమ్మ రాజిరెడ్డి ఆలయ కమిటీ సభ్యులు నారాయణ జగన్నాథం లక్ష్మణ్ తదితరులు పాల్గొన్నారు.

d, Hyderabad, Telangana State And Published From **Sai Publications**, # 8-5-108/303, RK Residency,

# ಆದ್ಯತಾ ಸಹಾಯಕ ಸಾಧನ ಸಲಕರಣೆಗಳ ವಿತರಣೆ

ಚಾಮರಾಜನಗರ: ನಗರದಲ್ಲಿರುವ ಮೊಬಿಲಿಟಿ ಇಂಡಿಯಾ ಸಂಸ್ಥೆಯ ಕಚೇರಿ ಆವರಣದಲ್ಲಿ ದೈಹಿಕ ವಿಕಲಚೇತನರು, ಹಿರಿಯ ನಾಗರಿಕರಿಗೆ ಮತ್ತು ಬುದ್ಧಿ ಮಾಂದ್ಯ ವಿಕಲಚೇತನ ಮಕ್ಕಳಿಗೆ ಅಗತ್ಯ ವಿರುವವಿವಿಧ ರೀತಿಯ ಸಹಾಯಕ ಸಾಧನ ಸಲಕರಣೆಗಳನ್ನು ವಿತರಿಸಲಾಯಿತು.



50 ವಿಕಲಚೇತನರು ಮತ್ತು ಹಿರಿಯ ನಾಗರಿಕರಿಗೆ ವಿವಿಧ ರೀತಿಯ ಸಹಾಯಕ ಸಾಧನ ಸಲಕರಣೆಗಳಾದ ವಿಶೇಷ ಶೌಚಾ ಲಯ ಕುರ್ಚಿ, ಮೊಣಕೈ ಊರುಗೋಲು, ಕಂಕಳು ಊರುಗೋಲು, ವಾಕಿಂಗ್ ಸ್ಟಿಕ್, ಕೇನ್ ವಾಕರ್ ಮತ್ತು 8 ಬುದ್ಧಿಮಾಂದ್ಯ ಮಕ್ಕಳಿಗೆ ದಿನನಿತ್ಯ ಚಟುವಟಿಕೆಗೆ ಪೂರಕವಾದ ಕಿಟ್ ಮುಂತಾದವುಗಳನ್ನು ವಿತರಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತ ನಾಡಿದ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಡಿ.ಎಸ್. ಭಾರತಿ ಅವರು, ಸಂಸ್ಥೆಯು ಇಲಾಖೆಗಳ ಸಹಕಾರ ದೊಂದಿಗೆ ವಿಕಲಚೇತನರು ಮತ್ತು ಹಿರಿಯಾ ನಾಗರಿಕರಿಗೆ ಅಗತ್ಯವಿರುವ ವಿವಿಧ ರೀತಿಯ ಸಹಾಯಕ ಸಾಧನ ಸಲಕ ರಣೆಗಳನ್ನು ವಿತರಿಸುತ್ತಿದೆ. ಆ ಮೂಲಕ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸು ತ್ತಿರುವುದು ಶ್ಲಾಘನೀಯ ಎಂದರು.

ಡಿಡಿಪಿಐ ರಾಮಚಂದ್ರರಾಜೇ ಅರಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಮಂಜುನಾಥ, ಅಂಗವಿಕಲರ ಕಲ್ಯಾಣಾ ಧಿಕಾರಿ ಸುರೇಶ, ಶಿಕ್ಷಣ ಇಲಾಖೆಯ ಜಿಲ್ಲಾ ಸಮನ್ವಯ ಸಂಪನ್ಮೂಲ ಶಿಕ್ಷಕರಾದ ಉಮೇಶ, ಜಿಲ್ಲಾ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಘದ ಗೌರವ ಅಧ್ಯಕ್ಷ ರಾದ ಕೃಷ್ಣಮೂರ್ತಿ, ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತ ರಾಜೇಶ್, ಸಂಸ್ಥೆಯ ವ್ಯವಸ್ಥಾಪಕರಾದ ಎಸ್.ಎನ್. ಆನಂದ್, ಸಂಯೋಜಕರಾದ ರಾಜಣ್ಣ, ಪ್ರೋಸ್ಥೆಟಿಕ್ಸ್ ಮತ್ತು ಆರ್ಥೋಟಿಕ್ಸ್ ತಂತ್ರಜ್ಞರಾದ ಕುಮಾರ, ಮಂಜುಳ, ರಾಜು, ಅನುಪಮ, ನಾಗಮ್ಮ, ರೇಷ್ಮ, ನಂದ, ಮಹದೇವಸ್ವಾಮಿ, ಇತರರು ಹಾಜರಿದ್ದರು.

WAKE UP TELANGANA
ENGLISH DAILY
Wake Up Telangana - 19 May 2024 - Page 2

# Former Cantonment Board Teacher Leads Free Examination Camp for Physically Disabled Individuals

Hyderabad
wake up telangana



Jampanna Pratap, a former teacher of the Cantonment Board, expressed his delight in organizing a free examination camp tailored for individuals with physical disabilities. The Lines Club of Hyderabad, in collaboration with Thirumalagiri Mobility India, orchestrated the event, marking a significant effort towards inclusivity and accessibility. Taking place at Sri Venkateswara Swamy Devasthanam in Boinapally New City Colony, the program saw active participation from Jampanna Pratap, who currently serves as the former Cantonment Board Vice President, alongside members of Falguni Temple as distinguished guests. Pratap took charge of initiating and supervising the assessment of equipment provided by Mobility India, specifically designed for individuals with physical disabilities. During the event, Pratap emphasized the importance of such equipment, acknowledging their typically high cost. He encouraged individuals with physical disabilities to seize the opportunity and avail themselves of the free equipment provided through initiatives like this examination camp. The camp not only provided practical assistance but also fostered a sense of community support for individuals with physical disabilities, demonstrating the power of collaboration and compassion in addressing the needs of marginalized communities.

# ಸಾಧನ-ಸಲಕರಣೆಗಳನ್ನು ಸರಿಯಾಗಿ ಬಳಸಲು ಸಲಹೆ



ಚಾಮರಾಜನಗರ: ಮೊಬಿಲಿಟಿ ಇಂಡಿಯಾ ಸಂಸ್ಥೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ಸಂಯುಕ್ತಾಶ್ರಯದಲ್ಲಿ ದೈಹಿಕ, ವಾಕ್ ಮತ್ತು ಶ್ರವಣ ದೋಷವುಳ್ಳ ಮಕ್ಕಳಿಗೆ ಅಗತ್ಯವಿರುವ ವಿವಿಧ ಸಹಾಯಕ ಸಾಧನ ಸಲಕರಣೆಗಳನ್ನು ವಿತರಿಸಲಾಯಿತು.

ನಗರದ ಮೊಬಿಲಿಟಿ ಇಂಡಿಯಾ ಸಂಸ್ಥೆಯ ಕಚೇರಿಯಲ್ಲಿ ನಡೆದ ಶಿಬಿರದಲ್ಲಿ 29 ವಿಕಲಚೇತನ ಮಕ್ಕಳಿಗೆ 74 ಬಗೆಯ ಬೆಳವಣಿಗೆ ಹಂತದ, ಚಲನ ವಲನ ಸಾಧನ ಸಲಕರಣೆಗಳು, ಶ್ರವಣ ಉಪಕರಣವನ್ನು ವಿತರಿಸಲಾಯಿತು.

ಸಂಸ್ಥೆಯ ಹಿರಿಯ ಕಾರ್ಯಕ್ರಮ ವ್ಯವಸ್ಥಾಪಕ ಎಸ್.ಎನ್.ಆನಂದ್ ಪ್ರಾಸ್ತಾವಿಕವಾಗಿ ಮಾತನಾಡಿ, ಸಂಸ್ಥೆಯಲ್ಲಿ ದೊರೆಯುವ ಪುನರ್ವಸತಿ ಸೇವೆಗಳು, ಸಹಾಯಕ ಸಾಧನ ಸಲಕರಣೆಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡು ವಿಕಲಚೇತನ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕೆ ಪೋಷಕರು ಸಹಕರಿಸಬೇಕೆಂದು ತಿಳಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಸೋಮಣ್ಣೇಗೌಡ ಮಾತನಾಡಿ, ಸಂಸ್ಥೆಯು ನೀಡಿದ ಸಾಧನ ಸಲಕರಣೆಗಳನ್ನು ನಿರಂತರವಾಗಿ ಬಳಕೆ ಮಾಡುವ ಮೂಲಕ ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಸಹಕಾರಿಯಾಗಬೇಕೆಂದು ಪೋಷಕರಿಗೆ ಸಲಹೆ ನೀಡಿದರು. ಜಿಲ್ಲಾ ಉಪ ಸಮನ್ವಯ ಯೋಜನಾಧಿಕಾರಿ ಲಕ್ಷ್ಮೀಪತಿ ಮಾತನಾಡಿದರು.

ಕೆನರಾ ಬ್ಯಾಂಕ್‌ನ ಮುಖ್ಯ ವ್ಯವಸ್ಥಾಪಕ ನಂಜುಂಡಸ್ವಾಮಿ, ರಮೇಶ್, ಶಿಕ್ಷಣ ಇಲಾಖೆಯ ಬಿ.ಐಇ.ಆರ್.ಟಿ ರೊಬೆಲೋ, ಸಂಸ್ಥೆಯ ಸಂಯೋಜಕ ರಾಜಣ್ಣ, ಪ್ರೋಸ್ಥೆಟಿಕ್ಸ್ ಮತ್ತು ಆರ್ಥೋಟಿಕ್ಸ್ ತಂತ್ರಜ್ಞರಾದ ಸುಧಾಕರ್, ರುಮಾನ, ನಾಗಮ್ಮ, ಕುಮಾರ ಮತ್ತು ಪ್ರತಾಪ್ ಮತ್ತು ಫಿಜಿಯೋ ತೆರಪಿಸ್ಟ್ ಮಂಜೇಶ್ ಮತ್ತು ಮಂಜುಳ, ಅನುಪಮ ಮತ್ತು ಮಹದೇವಸ್ವಾಮಿ, ರೇಷ್ಮಾ ಹಾಜರಿದ್ದರು.

**MOBILITY INDIA**

REHABILITATION RESEARCH & TRAINING CENTRE

1st & 1st 'A' Cross, J.P. Nagar 2nd Phase Bengaluru-560 078, Karnataka, India.

Tel: +91-080-2649 6999 / 2649 2222/ 4444 / 2659 7337 (Ext-101/9)

: e-mail@mobility-india.org